ಕರ್ನಾಟಕ ಸರ್ಕಾರ

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ

ಸಂಖ್ಯೆ: ಕಶಾಪಮ/ಪರೀಕ್ಷೆ/ಗಣಕ/2022-23 ದಿನಾಂಕ: 19 . 01.2023

## ಸುತ್ತೋಲೆ

**ವಿಷಯ:** ಮಾರ್ಚ್ 2023ರ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣ www.kseab.karnataka.gov.in ದ **PU EXAM PORTAL LOGIN** ನಲ್ಲಿ ನೀಡಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಮಾರ್ಚ್ 2023ರ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಕರಡು ಪ್ರವೇಶ ಪತ್ರಗಳನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಜಾಲತಾಣ www.kseab.karnataka.gov.in ದ **PU EXAM PORTAL LOGIN** ನಲ್ಲಿ ನೀಡಲಾಗಿರುತ್ತದೆ, ಕರಡು ಪ್ರವೇಶ ಪತ್ರದಲ್ಲಿ ನೀಡಲಾಗಿರುವ ಪ್ರತಿ ವಿದ್ಯಾರ್ಥಿಯ ಮಾಹಿತಿಯನ್ನು ಪ್ರಾಂಶುಪಾಲರು ದಿನಾಂಕ:**25.01.2023** ರೊಳಗೆ ಡೌನ್ ಲೋಡ್ ಮಾಡಿ ಖುದ್ದಾಗಿ ಪರಿಶೀಲಿಸಲು ಈ ಮೂಲಕ ಸೂಚಿಸಿದೆ. ಕರಡು ಪ್ರವೇಶ ಪತ್ರಗಳಲ್ಲಿ ನೀಡಲಾಗಿರುವ ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ಕಾಲೇಜಿನ ಪ್ರಾಂಶುಪಾಲರು ಪಾಲಿಸಬೇಕಾದ ಕ್ರಮಗಳನ್ನು ಈ ಕೆಳಗಿನಂತೆ ವಿವರಿಸಿದೆ.

1. ವಿದ್ಯಾರ್ಥಿಯ **ಹೆಸರು, ತಂದೆ ತಾಯಿಯ ಹೆಸರು ,ಲಿಂಗ, ಜಾತಿ ಹಾಗೂ ,ಮಾಧ್ಯಮ**ದಲ್ಲಿ ತಿದ್ದುಪಡಿಗಳಿದ್ದಲ್ಲಿ ಸದರಿ ಮಾಹಿತಿಗಳನ್ನು ವಿದ್ಯಾರ್ಥಿಯ SSLC ಅಂಕಪಟ್ಟಿಯಲ್ಲಿದ್ದಂತೆ ಸರಿಪಡಿಸಲು **UPDATE OPTION** ಮೂಲಕ ಅವಕಾಶ ನೀಡಲಾಗಿದೆ.
2. ವಿದ್ಯಾರ್ಥಿಯ **ಭಾವಚಿತ್ರದಲ್ಲಿ** ಯಾವುದೇ ವ್ಯತ್ಯಾಸಗಳಿದ್ದಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಮತ್ತೊಮ್ಮೆ ಅಪ್ಲೋಡ್ ಮಾಡಲು **UPDATE OPTION** ಮೂಲಕ ಅವಕಾಶ ನೀಡಲಾಗಿದೆ.
3. ಕರಡು ಪ್ರವೇಶ ಪತ್ರ ಬಂದಿರುವ ವಿದ್ಯಾರ್ಥಿಗಳ ಪಟ್ಟಿಯಿಂದ ಯಾವುದೇ ವಿದ್ಯಾರ್ಥಿಯ ಹೆಸರನ್ನು ಡಿಲೀಟ್ ಮಾಡಲು **REMOVE OPTION** ಮುಖಾಂತರ ಸೂಕ್ತ ಕಾರಣ (**SHORTAGE OF ATTENDANCE,FEES NOT PAID, NOT ADMITTED,TC ISSUED, DISCONTINUED** ಇತ್ಯಾದಿ) ವನ್ನು ನಮೂದಿಸಿ ಡಿಲೀಟ್ ಮಾಡುವುದು.
4. ಕರಡು ಪ್ರವೇಶ ಪತ್ರದ ಪಟ್ಟಿಯಲ್ಲಿ ಯಾವುದೇ ವಿದ್ಯಾರ್ಥಿಯ ಮಾಹಿತಿಯು ಬಂದಿಲ್ಲದಿದ್ದಲ್ಲಿ ಅಥವಾ ವಿದ್ಯಾರ್ಥಿಯ ಕರಡು ಪ್ರವೇಶ ಪತ್ರದಲ್ಲಿ ವಿಷಯ ತಿದ್ದುಪಡಿ, ಸಂಯೋಜನೆ ತಿದ್ದುಪಡಿಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ(ಪ್ರಥಮ ಪಿ.ಯು.ಸಿ ಅಂಕಪಟ್ಟಿ, ಜಿಲ್ಲಾ ಉಪನಿರ್ದೇಶಕರು ಅನುಮೂದಿಸಿರುವ ರಿಸಲ್ಟ್ ಶೀಟ್, SATS Checklist, Covering Letter)ಗಳೊಂದಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ಅರ್ಜಿ

Scanned by CamScanner

ಸಲ್ಲಿಸುವುದು, ಹಾಗೂ ಸಂಬಂಧಿಸಿದ ಜಿಲ್ಲಾಉಪನಿರ್ದೇಶಕರು ತಮ್ಮ ಜಿಲ್ಲೆಯಿಂದ ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ **KSEAB** ಮಂಡಲಿಯಲ್ಲಿ ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ದಿನಾಂಕ **25.01.2023** ರೊಳಗೆ ಸಲ್ಲಿಸುವುದು.

ಮೇಲೆ ಸೂಚಿಸಿರುವ ಎಲ್ಲಾ ಆನ್ ಲೈನ್ ಪ್ರಕ್ರಿಯೆಗಳನ್ನು ಕಾಲೇಜಿನ ಪ್ರಾಂಶುಪಾಲರು ಖುದ್ದಾಗಿ ತಮ್ಮ ಲಾಗಿನ್ ನಲ್ಲಿ ನಿರ್ವಹಿಸುವುದು. ನಮೂದಿಸಿರುವ ಮಾಹಿತಿಗಳಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬಂದಲ್ಲಿ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗುತ್ತಾರೆ ಹಾಗೂ ಕಾಲೇಜಿನ ಪ್ರಾಂಶುಪಾಲರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

19/1/23

ಮಾನ್ಯ ಅಧ್ಯಕ್ಷರು,
ಕರ್ನಾಟಕ ಶಾಲಾ ಪರೀಕ್ಷೆ ಮತ್ತು
ಮೌಲ್ಯ ನಿರ್ಣಯ ಮಂಡಲಿ.

**ಪ್ರತಿಗಳು:-**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

Scanned by CamScanner